# ಕರಾಮುವಿ ಸುದ್ದಿ ಪತ್ರಿಕೆ
## KSOU NewsLetter
Volume: 3 Issue: 3 May-June 2024

ಆಂತರಿಕ ಪ್ರಸಾರಕ್ಕೆ ಮಾತ್ರ

ಸಂಪುಟ: 3 । ಸಂಚಿಕೆ: 3 । ಮೇ – ಜೂನ್ 2024

# ಡಾ.ಬಿ.ಆರ್.ಅಂಬೇಡ್ಕರ್‌ರವರ 133ನೇ ಜನ್ಮ ದಿನಾಚರಣೆಯ ಪ್ರಯುಕ್ತ ವಿಶೇಷ ಉಪನ್ಯಾಸ






ಕರಾಮುವಿಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ದಿನಾಂಕ: 23–05–2024ರಂದು ಕಾವೇರಿ ಸಭಾಂಗಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರ 133ನೇ ಜನ್ಮ ದಿನಾಚರಣೆಯ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು.

ಈ ಸಮಾರಂಭದ ಉದ್ಘಾಟನೆಯನ್ನು ಮಾನ್ಯ ಪ್ರೊ. ಸಿ.ಬಸವರಾಜು, ಕುಲಪತಿಗಳು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿ, ಇವರು ನೆರವೇರಿಸಿದರು.



ಮಾನ್ಯ ಕುಲಪತಿಗಳಾದ ಪ್ರೊ.ಶರಣಪ್ಪ.ವಿ.ಹಲಸೆ ರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ವಿ.ವಿ.ಯ ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು, ಅಧ್ಯಾಪಕರು/ಅಧ್ಯಾಪಕೇತರ ನೌಕರರು, ವಿದ್ಯಾರ್ಥಿಗಳು ಹಾಗು ಕರಾಮುವಿಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## ಅಣ್ಣಮಾಚಾರ್ಯ ಜಯಂತಿ





ದಿನಾಂಕ.05.06.2024 ರಂದು ತೆಲುಗು ಸಂಶೋಧನ ಮತ್ತು ಅಧ್ಯಯನ ವಿಭಾಗದ ವತಿಯಿಂದ ಅಣ್ಣಮಾಚಾರ್ಯ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕುಲಪತಿಗಳಾದ ಪ್ರೊ. ಶರಣಪ್ಪ ವಿ.ಹಲಸೆ, ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಡೀನ್(ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮಿ, ಪ್ರೊ.ಹೆಚ್.ವಿಶ್ವನಾಥ್ ಕುಲಸಚಿವರು(ಪರೀಕ್ಷಾಂಗ), ಡೀನ್(ಅಧ್ಯಯನ ಕೇಂದ್ರ) ಪ್ರೊ.ಎಂ.ರಾಮನಾಥಂ ನಾಯುಡು ಹಾಗು ಕರಾಮುವಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 148 ನೇ ಜನ್ಮದಿನಾಚರಣೆ





ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 148ನೇ ಜನ್ಮದಿನೋತ್ಸವದ ಅಂಗವಾಗಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಯನ ಪೀಠದ ವತಿಯಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾ ಪನಾ ಮಂಡಳಿ ಸಭಾಂಗಣದಲ್ಲಿ ದಿನಾಂಕ: 04.06.2024ರಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 148ನೇ ಜನ್ಮದಿನೋತ್ಸವವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಕುಲಸಚಿವರಾದ ಪ್ರೊ. ಕೆ.ಬಿ ಪ್ರವೀಣರವರು ವಹಿಸಿದ್ದರು. ಕುಲಸಚಿವರು (ಪರೀಕ್ಷಾಂಗ), ಪ್ರೊ. ಹೆಚ್ ವಿಶ್ವನಾಥ್ ಮತ್ತು ಡೀನ್ (ಶೈಕ್ಷಣಿಕ) ಪ್ರೊ. ಲಕ್ಷ್ಮಿ ರವರು, ಡೀನ್ (ಅಧ್ಯಯನ ಕೇಂದ್ರ), ಪ್ರೊ.ರಾಮನಾಥಂ ನಾಯಡು, ಶಾಸನಬದ್ಧ ಅಧಿಕಾರಿಗಳು ಭಾಗವಹಿಸಿದ್ದರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜನ್ಮದಿನೋತ್ಸವದ ಅಂಗವಾಗಿ ಅಧ್ಯಾಪಕರಾದ ಡಾ.ಅಂಜನಮೂರ್ತಿ ಪಿ.ಕೆ ರವರು ಸಭಿಕರನ್ನು ಸ್ವಾಗತಿಸಿದರು. ಈ ಕಾರ್ಯಕ್ರಮದ ನಿರೂಪಣೆ ಶ್ರೀಮತಿ ನಿಶ್ಚಿತ ಡಿ.ಎಂ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠದ ಸಂಯೋಜನಾಧಿಕಾರಿಗಳಾದ ಡಾ. ಶಲ್ವಪಿಳ್ಳೈ ಅಯ್ಯಂಗಾರ್‌ರವರು, ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಕೇಂದ್ರ ಇವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಜೀವನ ಮತ್ತು ಸಾಧನೆಗಳನ್ನು ಕುರಿತು ಕುಲಸಚಿವರು (ಪರೀಕ್ಷಾಂಗ), ಡಾ.ಹೆಚ್ ವಿಶ್ವನಾಥ್‌ರವರು ಮಾತನಾಡಿದರು. ಡೀನ್ (ಶೈಕ್ಷಣಿಕ) ಪ್ರೊ. ಲಕ್ಷ್ಮಿರವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮಾಡಿರುವಂತಹ ಮಹಿಳಾ ಸಬಲೀಕರಣ, ಮಹಿಳೆಯರಿಗೆ ನೀಡಿರುವಂತಹ ಶಿಕ್ಷ ಣದ ಬಗ್ಗೆ ಮಾತನಾಡಿದರು. ಡೀನ್ (ಅಧ್ಯಯನ ಕೇಂದ್ರ) ಪ್ರೊ. ರಾಮನಾಥಂ ನಾಯುಡುರವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕೊಟ್ಟಿರುವಂತಹ ಮೀಸಲಾತಿಯ ಬಗ್ಗೆ ಮಾತನಾಡಿದರು.



ಮಾನ್ಯ ಕುಲಸಚಿವರು ಪ್ರೊ. ಕೆ.ಬಿ ಪ್ರವೀಣರವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ನೀಡಿ ರುವಂತಹ ಸಾಹಿತ್ಯದ ಕೊಡುಗೆಗಳು ಹಾಗು ಶಿಕ್ಷಣದ ಬಗ್ಗೆ ಮತ್ತು ಶೈಕ್ಷಣಿಕ ಕೊಡುಗೆಗಳ ಬಗ್ಗೆ ಮಾತನಾಡಿದರು. ಈ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿ ದ್ಯಾನಿಲಯದ ಬೋಧಕ/ ಬೋಧಕೇತರ ವರ್ಗದವರು ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದರು. ಅಧ್ಯಾಪಕರಾದ ಡಾ.ಅಂಜನಾಮೂರ್ತಿ ಪಿ.ಕೆ. ರವರು ವಂದನಾಪಣೆ ಯನ್ನು ಮಾಡಿದರು. ಕಾರ್ಯಕ್ರಮದಲ್ಲಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಅಧ್ಯಾಪಕರಾದ ಡಾ. ರವಿಪ್ರಸಾದ್, ಶ್ರೀ ಶಿವಶಂ ಕರ್, ಶ್ರೀಮತಿ ಸಲ್ವಿಕುಮಾರಿ. NAD ವಿಭಾಗದ ಶ್ರೀ ಮಲ್ಲೇಶ್ ಎಂ,ಶ್ರೀ ಮಂಜುನಾಥ್ ಇ, ಶ್ರೀ ಭರತ್‌ಕುಮಾರ್ ಸಿ.ಎನ್ ಇವರು ಸಹಕರಿಸಿದರು.

# ವಿದ್ಯಾರ್ಥಿ ಮತ್ತು ಅಧಿಕಾರಿಗಳ ನೇರ ಸಂವಾದ ಕಾರ್ಯಕ್ರಮ






ದಿನಾಂಕ:13.06.2024ರಂದು ಪರೀಕ್ಷಾಂಗ ಭವನದ ಕಲಿಕಾರ್ಥಿ ಕಲ್ಯಾಣ ಕೇಂದ್ರದಲ್ಲಿ ವಿದ್ಯಾರ್ಥಿ ಮತ್ತು ಅಧಿಕಾರಿಗಳ ನೇರ ಸಂವಾದ ಕಾರ್ಯಕ್ರಮ ವನ್ನು ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೇರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು, ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತರಾದ ಶ್ರೀ ಅಂಶಿ ಪ್ರಸನ್ನಕುಮಾರ್ ರವರು ಆಗಮಿಸಿ ದ್ದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಕುಲಸಚಿವರು(ಪರೀಕ್ಷಾಂಗ) ಪ್ರೊ.ಹೆಚ್.ವಿಶ್ವನಾಥ್, ಡೀನ್(ಅಧ್ಯಯನ ಕೇಂದ್ರ) ಪ್ರೊ.ಎಂ.ರಾಮನಾಥಂ ನಾಯುಡು ಹಾಗು ಸಿಬ್ಬಂದಿ ಹಾಜರಿದ್ದರು.

# ವಿಶ್ವ ಪರಿಸರ ದಿನಾಚರಣೆ

ಜೂನ್ 05 ರಂದು ವಿಶ್ವದಾದ್ಯಂತ ಪರಿಸರ ದಿನಾಚರಣೆಯನ್ನು ಆಚರಿಸುತ್ತಾ ಬಂದಿದೆ. ಈ ದಿನಾಚರಣೆಯ ಆಚರಣೆಯ ಮುಖ್ಯ ಉದ್ದೇಶ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸಂರಕ್ಷಿಸಲು ಜಾಗೃತಿ ಮೂಡಿಸುವ ಹಾಗೂ ಸಂಕ್ಷಣೆಯನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿರುವ ಸಾಮಾಜಿಕ ಕಾರ್ಯಕ್ರಮವಾಗಿದೆ.

ಈ ದಿನದ ಆಚರಣೆಯನ್ನು ಪ್ರತಿ ವರ್ಷ ಒಂದೊಂದು ಥೀಮ್‌ನಡಿಯಲ್ಲಿ ಆಚರಿಸುವುದು ವಾಡಿಕೆಯಾಗಿದ್ದು, ಅದರಂತೆ 2024 ರ ವಿಶ್ವ ಪರಿಸರ ದಿನದ ಥೀಮ್ ಬಂದು "ಭೂಮಿ ಮರುಸ್ಥಾಪನೆ, ಮರು ಭೂಮೀಕರಣ ಮತ್ತು ಬರ ಸ್ಥಿತಿ ಸ್ಥಾಪಕತ್ವ" ಇದನ್ನು ಸರಳಿಕರಿಸಿದಲ್ಲಿ ಈ ವರ್ಷದ ಪರಿಸರ ದಿನಾಚರಣೆಯ ಘೋಷವಾಕ್ಯವನ್ನು "ನಮ್ಮ ಭೂಮಿ, ನಮ್ಮ ಭವಿಷ್ಯ". ಈ ಘೋಷ ವಾಕ್ಯವನ್ನು ಅರ್ಥೈಸುವುದಾದರೆ ವಿಶ್ವ ಪರಿಸರ ವ್ಯವಸ್ಥೆಯನ್ನು ಮುಂದಿನ ಭವಿಷ್ಯಕ್ಕೆ ಪುನ: ಸ್ಥಾಪಿಸಲು ವಿಶ್ವದಾದ್ಯಂತ ಜನರನ್ನು ಒಂದುಗೂಡಿಸುವುದಾಗಿರುತ್ತದೆ. ಹವಾಮಾನ ಬದಲಾವಣೆ, ಪರಿಸರ ಮಾಲಿನ್ಯ, ಅರಣ್ಯಗಳ ನಾಶ ಮುಂತಾದಂತಹ ಪರಿಸರ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದೇ ಇದರ ಮುಖ್ಯ ಉದ್ದೇಶವಾಗಿರುತ್ತದೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಾಡುಗಳು, ಜಾಗು ಪ್ರದೇಶಗಳು, ಸಾಗರಗಳು ಕೂಡಿಯೇ ನಮ್ಮ ಪರಿಸರ ನಿರ್ಮಾಣವಾಗಿದೆ. ಇವುಗಳಲ್ಲೆವು ಮಾನವನ ಜೀವನಕ್ಕೆ ಬಹಳ ಮುಖ್ಯವಾಗಿದ್ದು, ಕಾಲ ಕ್ರಮೇಣ ಮಾನವನು ಇವುಗಳೆಲ್ಲವನ್ನು ತನ್ನ ಸ್ವಾರ್ಥಕ್ಕೆ ಆವರಿಸಿಕೊಂಡಿರುವುದು ವಿಪರ್ಯಾಸವೇ ಸರಿ. ಆದ್ದರಿಂದ ಈ ವರ್ಷದ ಥೀಮ್‌ನಡಿಯಲ್ಲಿ ಪರಿಸರ ವ್ಯವಸ್ಥೆಗಳನ್ನು ಮರುಸ್ಥಾಪಿಸುವುದು ಎಂದರೆ ಹೆಚ್ಚು ಹೆಚ್ಚು ಮರಗಳನ್ನು ನಡೆವುದು ಪರಿಸರ ವ್ಯವಸ್ಥೆಗಳನ್ನು ಮರುಸ್ಥಾಪಿಸುವುದರ ಮೂಲಕ ಹವಾಮಾನದಲ್ಲಾಗುವ ಬದಲಾವಣೆಗಳನ್ನು ತಗ್ಗಿಸಬಹುದು ಇದರಿಂದ ಮಾನವನ ಯೋಗಕ್ಷೇಮವನ್ನು ಕಾಪಾಡಿಕೊಳ್ಳಬಹುದಾಗಿರುತ್ತದೆ. ಮಾನವನ ಭವಿಷ್ಯವು ಶುಚಿಯಾದ ಪರಿಸರದ ಮೇಲೆ ಅವಲಂಬಿತವಾಗಿರುತ್ತದೆ.




ಆ ಶುಚಿತ್ವ ಅವನು ವಾಸಿಸುತ್ತಿರುವ ನೆಲ, ಜಲ, ವಾಯು, ಆಕಾಶಗಳನ್ನೆ ಅವಲಂಬಿಸಿದೆ. ಮಾನವನ ದುರಾಸೆಯಿಂದ ಪರಿಸರವು ನಾಶವಾಗುತ್ತಿದೆ. ಪರಿಸರವನ್ನು ನಾವುಗಳು ಉಳಿಸದೆ ಹೋದರೆ ಮುಂದಿನ ದಿನಗಳಲ್ಲಿ ಸಂಕಷ್ಟದ ದಿನಗಳನ್ನು ಎದುರಿಸಬೇಕಾಗಿರುತ್ತದೆ, ಮನುಷ್ಯ ಅತಿಯಾದ ದುರಾಸೆಯಿಂದ ತನ್ನ ಸುತ್ತಮುತ್ತಲಿನ ಪರಿಸರವನ್ನು ನಾಶ ಮಾಡುತ್ತಿದ್ದರೆ ಇದರಿಂದ ಹಲವಾರು ದುಷ್ಪರಿಣಾಮಗಳು ಬೀರುತ್ತಿದ್ದು ವಾಯು ಮಾಲಿನ್ಯ ಹೆಚ್ಚಾಗುತ್ತಿದೆ, ಮಳೆ ಕಡಿಮೆಯಾಗುತ್ತಿದೆ, ಬರಗಾಲವು ಪ್ರತಿ ವರ್ಷ ಹೆಚ್ಚಾಗುತ್ತಿದೆ, ಸಕಾಲದಲ್ಲಿ ಮಳೆಯಾಗದೆ, ಬೆಳೆಯಾಗದ ರೈತಕುಲ ಸಂಕಷ್ಟಕ್ಕೆ ಸಿಲುಕುತ್ತಿದೆ. ಇದನ್ನು ಅರಿತ ನಾವುಗಳು ಮಗುವಿನಿಂದ ವೃದ್ಧರವರೆಗೆ ಪ್ರತಿ ವರ್ಷ ಒಂದೊಂದು ಸಸಿಗಳನ್ನು ನೆಟ್ಟು ನೀರು ಹಾಕಿ ಬೆಳಸದೆ ಹೋದರೆ ಮುಂದಿನ ದಿನಗಳಲ್ಲಿ ಭಯಂಕರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗಬಹುದು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿರುತ್ತದೆ. ವಿಶ್ವ ಪರಿಸರ ದಿನವು ಪರಿಸರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಾಮೂಹಿಕ ಕ್ರಿಯೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ.

ಮಾನವ ಪರಿಸರದ ಶಿಶುವಾಗಿದ್ದು ಎಲ್ಲರಿಗೂ, ಎಲ್ಲಕ್ಕೂ ಜೀವಧಾತುವಿರುವ ಪರಿಸರವಿಲ್ಲದೆ ಮಾನವ ಅಸ್ತಿತ್ವವೇ ಇಲ್ಲ, ಈ ನಿಟ್ಟಿನಲ್ಲಿ ಪ್ರತಿಯೊಬ್ಬರಿಗೂ ಪರಿಸರದ ಅವಶ್ಯಕತೆ. ಅನಿವಾರ್ಯತೆ ಎರಡು ಇರುವುದರಿಂದ ನಾವು ಇರುವ ಪರಿಸರವನ್ನು ಪರಿಶುದ್ಧವಾಗಿ ಉಳಿಸಿಕೊಳ್ಳುವ ಪ್ರಾಮಾಣಿಕತೆ ಬೇಕು. ಜೀವ ಸಂಕುಲದ ಉಳಿವಿಗಾಗಿ ಪ್ರತಿಯೊಬ್ಬರು ಪರಿಸರ ಸಂರಕ್ಷಣೆಯ ಹೊಣೆಗಾರಿಕೆ ಹೊರಲೇಬೇಕಾಗಿರುತ್ತದೆ. ಮನುಷ್ಯನ ಹೊರತು ಪಡಿಸಿ ಉಳಿದ ಎಲ್ಲಾ ಜೀವ ಸಂಕುಲಗಳು, ಪರಿಸರ ಸ್ನೇಹಿಯಾಗಿ ಬದುಕುತ್ತವೆ. ಪರಿಸರಕ್ಕೆ ಯಾವುದೇ ದಕ್ಕೆ ಉಂಟುಮಾಡುವುದಿಲ್ಲ. ಆದರೆ ಮನುಷ್ಯ ಮಾತ್ರ ಪ್ರಕೃತಿಯಿಂದ ಎಲ್ಲವನ್ನು ಪಡೆದು ಪರಿಸರವನ್ನು ನಾಶಮಾಡಿ ಬದುಕುತ್ತಿರುವುದು ದುರಂತ ಖಾಲಿ ಬಿದ್ದಿರುವ ಜಾಗಗಳಲ್ಲಿ ರಸ್ತೆಯಂಚಿನಲ್ಲಿ ಜನೋಪಯೋಗಿ ಮರಗಳಾದ ಅರಳಿಮರ, ಆಲದಮರ, ಬಸರಿಮರ, ನೇರಳೆಮರ, ಔಷದಿ ಸಸ್ಯಗಳನ್ನು ನೆಡುವುದು ಅಗತ್ಯವಿದೆ. ಇಂಗಾಲದಂತಹ ಅನೇಕ ವಿಷಾನಿಲಗಳು ಹೆಚ್ಚಾಗುತ್ತಿದೆ. ವಾತಾವರಣ ಕಲುಷಿತಗೊಳ್ಳುತ್ತಿದೆ. ಅದಲ್ಲದೆ, ಮನುಷ್ಯನ ಆರೋಗ್ಯದ ಮೇಲೆ ಅನೇಕ ಪ್ರಭಾವ ಬೀರುವುದನ್ನು ತಡೆಯಲು ಅರಣ್ಯೀಕರಣ ಅತ್ಯಗತ್ಯ.

**"ನಾವು ಒಗ್ಗೂಡಿ ಮರಗಳನ್ನು ನೆಡೋಣ ಮತ್ತು ಪರಿಸರವನ್ನು ಸ್ವಚ್ಛಗೊಳಿಸೋಣ"**

ಡಾ.ವಿ. ಶೀಲ
ಸಹಾಯಕ ಗ್ರಂಥಪಾಲಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು– 570006

# ಪರಿಸರ ದಿನಾಚರಣೆ



ದಿನಾಂಕ:05.06.2024ರಂದು ಕರಾಮುವಿಯ ಆವರಣದಲ್ಲಿ ಗಿಡ ನೆಡುವುದರ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಕುಲಪತಿಗಳಾದ ಪ್ರೊ. ಶರಣಪ್ಪ ವಿ.ಹಲಸೆ, ಕುಲಸಚಿವರಾದ ಪ್ರೊ. ಕೆ.ಬಿ.ಪ್ರವೀಣ, ಡೀನ್(ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮಿ, ಪ್ರೊ.ಹೆಚ್.ವಿಶ್ವನಾಥ್ ಕುಲ ಸಚಿವರು(ಪರೀಕ್ಷಾಂಗ), ಡೀನ್(ಅಧ್ಯಯನ ಕೇಂದ್ರ) ಪ್ರೊ.ಎಂ.ರಾಮನಾಥಂ ನಾಯುಡು ಸ್ಪರ್ಧಾತ್ಮಕ ಪರೀಕ್ಷಾ ವಿಭಾಗದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಭಾಷಾಂತರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾದ ಡಾ.ಅವರೆಕಾಡು ವಿಜಯಕುಮಾರ್ ಹಾಗು ಕರಾಮುವಿಯ ಸಿಬ್ಬಂದಿ ಹಾಜರಿದ್ದರು.

# ENROLMENT IN HIGHER EDUCATION INCREASES

The higher education sector, comprising tertiary and post-school learning in universities and other institutions, has witnessed acceleration in total enrolment coupled with rising 'enrolment equity' over the past eight years. As per All India Survey on Higher Education (AISHE) 2021-22, total enrolment in higher education has increased to nearly 4.33 crore in FY22 from 4.14 crore in FY21 and 3.42 crore in FY15 (an increase of 26.5 per cent since FY15), said the Economic Survey 2023-24 tabled in Parliament today by the Union Finance and Corporate Affairs Minister, Smt Nirmala Sitharaman.

**Rising equity in higher education**

The Survey mentioned that the rise in enrolment in higher education has been driven by underprivileged sections such as SC, ST and OBC, with a faster growth in female enrolment across sections. Female enrolment in higher education increased to 2.07 crore in FY22 from 1.57 crore in FY15, i.e. a 31.6 per cent increase. The growing equity in higher education implies better employment opportunities for the hitherto backward sections.

**Re-imagining lifelong learning through a digital prism**

The Survey mentioned that India has 26.52 crore students in school, 4.33 crore in higher education and more than 11 crore learners in skilling institutions. The vast expanse of the educational landscape comprises 14.89 lakh schools, 1.50 lakh secondary schools, 1.42 lakh higher secondary schools, 1,168 Universities, 45,473 colleges, 12,002 standalone institutions, 94.8 lakh teachers in school education and 15.98 lakh teachers in higher education.

The National Credit Framework (NCrF), announced under National Education Policy 2020 in April 2023, forms the bulwark of the regulatory architecture underpinning life-long learning. Bolstering the regulatory architecture is an extensive array of digital solutions, such as digital public infrastructure (DPI), which act as force multipliers. Prime among India's educational DPIs is APAAR, i.e. Automated Permanent Academic Account Registry, which serves as an electronic registry for institutions, students, and faculty by creating unique identities and lifelong academic credentials for each stakeholder in the education space. APAAR is supplemented by the Academic Bank of Credits (ABC), an online repository of academic credits that facilitates students' mobility across Higher Education Institutions (HEIs) through a formal process of credit recognition, accumulation, transfer and redemption. Once an APAAR ID is created, HEIs map the credits a student earns to their ID, with all such credits stored in the ABC in demat form.

The twin solution of APAAR and ABC, by allowing real-time verification of identity and academic credentials, paves the way for several interesting use cases. These include the possibility of students pursuing credit courses from different institutions for a particular qualification (now a reality) or targeting scholarships/ internships/ educational loans using academic profiles. As of July 2024, 2037 HEIs have onboarded ABC, and 30.13 crore APAAR IDs have been created for students of higher education, school education and skill institutes.

**Way forward in education**

The Survey highlighted that as education is one of the most critical areas for India's development, mission-mode and cost-effective implementation of well-designed and well-intentioned programmes is essential to improve the quality of education, especially primary education, without which further years of education add little value. To realise the same, unity of purpose and convergence of efforts across the centre, state, and local Governments is called for, as 'public education' is a concurrent list subject. Increasing the cost-effectiveness of public spending on education requires spending on pedagogy and governance. This can include filling supervisory positions to monitor teaching quality, recognition of good and bad teacher performance, and hiring of local volunteers to ensure 'teaching at the right level' as textbook completion means little if children are way behind curricular standards.

**India making headway in R&D**

The Survey highlighted that India is making rapid progress in R&D, with nearly 1,00,000 patents granted in FY24, compared to less than 25,000 patent grants in FY20.

According to WIPO, India saw the highest growth (31.6 %) in patent filings in 2022. India has consistently improved its rank in the Global Innovation Index (GII) from 81st position in 2015 to 40th in 2023, as per GII (2023).

On the human resource side, total Ph.D. enrolment in India has increased to 81.2 per cent in FY22 (2.13 lakh) from FY15 (1.17 lakh). The Gross Expenditure on R&D (GERD) in the country has been consistently increasing over the years and has more than doubled from ₹60,196.8 crore in FY11 to ₹ 127,381 crore in FY21 As a mark of India's ascent in high-quality research, the country climbed up to 9th rank in the Nature's Index 2023, overtaking Australia and Switzerland. India's share of high-quality research articles (measured in terms of absolute numbers and not percentages) increased by 44 per cent in the past four years, i.e., from 1039.7 in 2019 to 1494.7 in 2023.

The Government has recently decided to increase the scholarships for students pursuing PhD and Post-Doctoral research. Further, India has launched its own National Research Foundation called 'Anusandhan' operationalised by the Department of Science and Technology (under the Anusandhan National Research Foundation Act, 2023 Act). This foundation will act as an apex body that aims to strengthen and promote the R&D ecosystem. In the interim budget of FY25, the Government also announced a corpus of Rs. 1 lakh crore for research and innovation in the country, adopting the slogan "Jai Jawan, Jai Kisan, Jai Vigyan, Jai Anusandhan".

**by PIB Delhi**

# Submission of 2022-23 Annual Quality Assurance Report (AQAR)

Karnataka State Open University (KSOU), Mysuru, is a State Public University established by an act of the State Legislature in 1992, which came into force on June 1, 1996. Since its establishment, KSOU secured an A+ Grade with a CGPA of 3.31 from NAAC in its first cycle of 2017-18 to 2021-22.

This A+ Grade is valid until May 18, 2028. To receive the NAAC grade in Cycle 2 (2027-28), the NAAC requires the HEI to submit an Annual Quality Assurance Report (AQAR) every year. Accordingly, under the leadership of Prof. Sharanappa V. Halse, Vice-Chancellor, with the support of Prof. Praveena K B, Registrar and the guidance of the Dr. Niranjan Raj S, Director of CIQA, submitted the 2022-23 AQAR to the NAAC portal on May 7, 2024, and it was accepted by NAAC on May 27, 2024.

On behalf of KSOU, the Director of CIQA has extended sincere appreciation to all the seven Criteria Chairpersons and Co-Chairpersons for their involvement in completing the 2022-23 AQAR. The list of the seven Criteria Chairpersons and Co-Chairpersons is below:

| Sl. No. | Name of the Committee | Chairperson | Co-Chairperson |
|---|---|---|---|
| 1 | Committee for Preparation of Curricular Aspects | Dr. Jayapal H R, Associate Professor, DOS&R in Sociology | Dr. Harsha T S, Assistant Professor, DOS&R in Environmental Science |
| 2 | Committee for Preparation of Teaching-Learning and Evaluation | Dr. Mahesha V Assistant Professor, DOS&R in Commerce | Dr. Naveen G V Assistant Professor, DOS&R in Commerce |
| 3 | Committee for Preparation of Research, Innovations and Exten-sion | Dr. R H Pavithra, Associate Professor, DOS&R in Economics | Dr. H Rajeshwari, Director, R&D Cell |
| 4 | Committee for Preparation of Infrastructure and Learning Resources | Dr. Manjunatha C S, Assistant Professor, DOS&R in Geography | Dr. Raju N G, Assistant Professor, DOS&R in Biotechnology |
| 5 | Committee for Preparation of Learner Support and Progression | Prof. Ramanatham Naidu M, Dean (Study Centre) & Professor of Telugu Dept. | Dr. Chandrashekar Y P,Assistant Professor, DOS&R in Geography |
| 6 | Committee for Preparation of Governance, Leadership and Management | Prof. N Lakshmi, Dean (Academic) & Professor of Education Dept. | Dr. Sheela V, Assistant Librarian, Library |
| 7 | Committee for Preparation of Institutional Values and Best Practices | Dr. Hemalatha M S, Assistant Professor, DOS&R in Food Science | Dr. J S Chandrashekar Assistant Professor, DOS&R in Environmental Science |
| Overall Coordinator of 2022-23 AQAR | | Dr. S Niranjan Raj Director, CIQA | |

Further, the Director of CIQA has extended appreciation to all teaching and non-teaching staff of on behalf of KSOU for their invaluable support in completing the 2022-23 AQAR. The Director of CIQA also added that they expect the same cooperation for the 2023-24 AQAR.

# ಅಂತರಾಷ್ಟ್ರೀಯ ಯೋಗ ದಿನಾಚರಣೆ





ದಿನಾಂಕ:21.06.2023 ರಂದು ಕರಾಮುವಿಯ ಘಟಿಕೋತ್ಸವ ಭವನದ ಆವರಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ವಾಸ ಪ್ರವೀಣ ಯೋಗರತ್ನ ಗಂಗಾಧರ ಗುರೂಜಿ, ಆಯುರ್ ಯೋಗ ಕೇಂದ್ರ, ಇಂದಿರಾನಗರ, ಬೆಂಗಳೂರು. ಡೀನ್(ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮಿ, ಡೀನ್(ಅಧ್ಯಯನ ಕೇಂದ್ರ) ಪ್ರೊ. ಎಂ.ರಾಮನಾಥಂ ನಾಯುಡು, ಡಾ.ವಿ. ಶೀಲ ಸಹಾಯಕ ಗ್ರಂಥಪಾಲಕರು ಹಾಗು ಕರಾಮುವಿಯ ಸಿಬ್ಬಂದಿ ವರ್ಗದವರು ಭಾಗವಹಿಸಿದರು.

# ಭಾಷಾ ಪ್ರಯೋಜನಗಳು

**ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯಂ ।**
**ಯದಿ ಶಬ್ದಾಹ್ವಯಂ ಜ್ಯೋತಿರಾ ಸಂಸಾರನ್ನ ದೀಪ್ಯತೇ ॥**

ಭಾಷೆ ಎಂಬ ದೀಪವು ಜೀವನದುದ್ದಕ್ಕೂ ಬೆಳಗದೆ ಹೋಗಿದ್ದರೆ ಇಡೀ ಜಗತ್ತು ಕತ್ತಲೆಯಿಂದ ಕೂಡಿರುತ್ತಿತ್ತು. ಸಂಸ್ಕೃತದ ದಂಡಿಯ ಮಾತಿನಲ್ಲಿ ಈ ಮೇಲಿನ ಸ್ವಾರಸ್ಯಗರ್ಭಿತ ಅರ್ಥ ತುಂಬಿದೆ. 'ಮಾನವ' ಜೀವಿ ಮಾನವನಾದದ್ದೂ ಭಾಷೆಯಿಂದಲೇ ನಿಜ. ಭಾಷೆಯೂ ಮಾನವನಿಗೆ ಸೀಮಿತವಾಗಿ ದೊರೆತಂತಹಃ ಕಾಣಿಕೆ. ಈ ಕಾಣಿಕೆ ಮಾನವನನ್ನು ಹೊರತುಪಡಿಸಿ ಉಳಿದ ಮಾನವೇತರ ಜೀವರಾಶಿಗಳಿಗೆ ದೊರಕಲಿಲ್ಲ. 'ಭಾಷೆ' ಎಂಬ ಸಂಪರ್ಕ ಸಾಧನದಿಂದಲೇ ಮಾನವ ಇತರ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಒಂದು ವೇಳೆ ಭಾಷೆ ಇಲ್ಲದಿದ್ದರೆ, ಮಾನವನಿಗೂ ಪ್ರಾಣಿಗಳಿಗೂ ಯಾವ ಬಗೆಯ ವ್ಯತ್ಯಾಸವೂ ಕಾಣುತ್ತಿರಲಿಲ್ಲ. ಭಾಷೆಯಿಲ್ಲದಿದ್ದರೆ ಮಾನವನ ಜೀವನ ಮರಳುಗಾಡಿನ ಸಸ್ಯದಂತೆ ಎಂದರೆ ತಪ್ಪಾಗಲಾರದು. ಪ್ರಾಪಂಚಿಕ ಜ್ಞಾನದ ಅರಿವೂ ಮತ್ತು ವ್ಯವಹಾರವೂ ಸಾಧ್ಯವಾಗುತ್ತಿರಲಿಲ್ಲ. ಜೀವನದಲ್ಲಿ ಯಾರು ಭಾಷೆಯನ್ನು ಬಳಸುವುದಿಲ್ಲವೋ (ಆಡುವುದು) ಅಂತಹವರು, ಜೀವಿತ ಅವಧಿಯಲ್ಲಿ ಅತಿದೊಡ್ಡ ನಷ್ಟದ ಹೊರೆಯನ್ನು ಹೊತ್ತಂತೆ. ಮಾತನಾಡುವ ಭಾಷೆಯೇ ಆಗಲಿ, ಬರಹ ಭಾಷೆಯಾಗಲಿ ಆಲೋಚನಾಶಕ್ತಿಗೆ ಒಂದು ಸಾಧನವಿದ್ದಂತೆ. ಭಾಷೆಯಿಂದ ಪರಸ್ಪರ ಅರಿವಿನ ಪ್ರಜ್ಞೆ ಮೂಡುತ್ತದೆ. ಆಲೋಚಿಸುವುದು, ಅಭಿವ್ಯಕ್ತಿಸುವುದು ಎಲ್ಲ ಭಾಷೆಯ ಮೂಲಕ ಆದ್ದರಿಂದಲೇ ಭಾಷಾವಿಜ್ಞಾನಿಗಳೂ ತಮ್ಮ ಆಸೆ, ಆಕಾಂಕ್ಷೆಗಳನ್ನೂ, ಯೋಚನೆ, ಸುಖ–ಸಂತೋಷಗಳನ್ನು ಬೇರೊಬ್ಬರ ಜೊತೆ ಹಂಚಿಕೊಳ್ಳುವ ವ್ಯವಸ್ಥೆಯನ್ನು ಭಾಷೆ ಎಂದೂ ಭಾಷೆಯೂ ಒಂದು ಸಮೂಹ ಮಾಧ್ಯಮ ಎಂತಲೂ ಹೇಳಿದ್ದಾರೆ.

ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ, ಸಾಹಿತ್ಯಕ ಹಾಗೂ ರಾಜಕೀಯ ಮೊದಲಾದ ಪ್ರಸ್ತುತ ಕ್ಷೇತ್ರಗಳಲ್ಲಿ ಭಾಷೆಯ ಪ್ರಯೋಗ ಅಥವಾ ಸಹಾಯ ಇಲ್ಲದೇ ಹೋಗಿದ್ದರೆ ಮನುಷ್ಯ ಪ್ರಗತಿ ಪಥದಲ್ಲಿ ಸಾಗಲು ಸಾಧ್ಯವೇ ಆಗುತ್ತಿರಲಿಲ್ಲ. ಒಟ್ಟಾರೆ, 'ಭಾಷೆ' ಮಾನವನ ಸರ್ವಜೀವನದ ಮೇಲೆ ಅಪಾರವಾದ ಪ್ರಭಾವವನ್ನು ಬೀರಿದೆ ಎಂಬುದಂತು ಸತ್ಯವಾದ ಸಂಗತಿಯಾಗಿದೆ.

**'ತಂದೆ ಮಕ್ಕಳಿಗೆ ವಿದ್ಯೆಯಂ ಕಲಿಸದಿರ್ದೊಡೆ ಕೊಂದಂ**
**ಲಕ್ಕ ಧನಮಿರಲು ಕೆಡಗುಂ**
**ಚಿಕ್ಕಂದಿನ ವಿದ್ಯೆ ಕೊನೆಗೆ ಚೂಡಾರತ್ನಂ'**

ಇದು ಬಹಳ ಕಾಲದಿಂದಲೂ ಪ್ರಚಲಿತವಾಗಿರುವ ಪ್ರಸಿದ್ಧ ಉಕ್ತಿಯಲ್ಲಿ ಒಂದು. ಮಾನವನ ಜೀವನದಲ್ಲಿ ಭಾಷೆಯ ಮಹತ್ವ, ಪಾತ್ರ, ಪ್ರಯೋಜನ, ಎಷ್ಟೆಂಬುದನ್ನು ಕಾವ್ಯದ ರೂಪದಲ್ಲಿ ಈ ಮೇಲಿನ ಸಾಲುಗಳು ನಮಗೆ ತಿಳಿಯಪಡಿಸುತ್ತವೆ. ತಂದೆಯ ಆದ್ಯ ಕರ್ತವ್ಯವೆಂದರೆ, ಮಕ್ಕಳಿಗೆ ವಿದ್ಯೆ ಕಲಿಸುವುದು. ಒಂದು ವೇಳೆ ಕಲಿಸಲಿಲ್ಲ ಎಂದರೆ ತಂದೆಯೇ ಸ್ವತಃ ತನ್ನ ಮಕ್ಕಳನ್ನು ಕೊಂದಂತಾಗುತ್ತದೆ. ಲಕ್ಷ ಹಣವಿದ್ದರೂ ಕೇಡು, ಆದರೆ ದಕ್ಷ ವಿದ್ಯೆ ಕಲಿತರೆ ಮಾತ್ರ ಎಂದಿಗೂ ನಾಶವಾಗುವುದಿಲ್ಲ, ಕೆಡುವುದಿಲ್ಲ. ಅಂತೆಯೇ ನಮ್ಮ ಹಿರಿಯರು ಭಾಷೆಯನ್ನು ಹಿಡಿದಿರುವ ಲಿಪಿಗೆ 'ಅಕ್ಷರ' ಎಂದು ಕರೆದಿದ್ದಾರೆ. ಇಲ್ಲಿ 'ಅ' ಎಂದರೆ ಇಲ್ಲ ಎಂದರ್ಥ, 'ಕ್ಷರ' ಎಂದರೆ ನಾಶವಾಗು ಎಂದು ಅರ್ಥೈಯಿಸುತ್ತದೆ. ಇದರ ಮೂಲಾರ್ಥ ಅಕ್ಷರ 'ನಾಶವಾಗದಂತದ್ದು' ಎಂದರ್ಥ ನೀಡುತ್ತದೆ. ಭಾಷೆಯ ಇತಿಹಾಸವನ್ನು ತಿಳಿಯುವಲ್ಲಿ ಮತ್ತು ಭಾಷೆಯನ್ನು ಒಂದು ಕಾಲದಿಂದ ಇನ್ನೊಂದು ಕಾಲಕ್ಕೆ ಭಾಷಾ ಪ್ರಯೋಜನಗಳು ಬರಹ ರೂಪದಲ್ಲಿ ಪರಿವರ್ತಿಸುವಲ್ಲಿ 'ಲಿಪಿಯ' ಪಾತ್ರ ಮಹತ್ವವಾದದ್ದು. ಒಂದು ಭಾಷೆ ಬರಹ ರೂಪದಲ್ಲಿ ಬರುವಂತದ್ದು ಲಿಪಿಯಿಂದಲೇ, ಒಂದು ವೇಳೆ ಲಿಪಿ ಇಲ್ಲದಿದ್ದರೆ ಭಾಷೆ ಬರಿ ಆಡುಮಾತಿನಲ್ಲೇ ಉಳಿಯುತ್ತಿತ್ತೇನೋ? ಇಂದಿಗೂ ನಾವು ಕೆಲವು ಲಿಪಿರಹಿತ ಭಾಷೆಗಳನ್ನು ಗಮನಿಸಬಹುದು. ಅಂದರೆ ಬರಿ ಆಡುಮಾತಿನಲ್ಲಿ ಬಳಸುವಂತದ್ದು. ಇವುಗಳಿಗೆ ಲಿಪಿ ಇಲ್ಲ. ಉದಾಹರಣೆಗೆ ತುಳು ಭಾಷೆಗೆ ಲಿಪಿ ಇಲ್ಲ.

ಭಾಷೆ ಮಾನವನ ಅಂತರಂಗದ ಅಭಿವ್ಯಕ್ತಿ. ಅದು ಆತನ ಅಂತರಂಗದ ಕನ್ನಡಿಯಂತೆ. ಮಾನವ ತನ್ನ ಅಂತರಂಗದ ಭಾವನೆಗಳನ್ನು ಅಭಿಪ್ರಾಯಗಳನ್ನು ಭಾಷೆಯ ಮೂಲಕವಾಗಿ ಅಭಿವ್ಯಕ್ತಿಸುತ್ತಾನೆ. ಅದ್ದರಿಂದಲೇ ಭಾಷಾವಿಜ್ಞಾನಿಗಳು ಭಾಷೆ ಎಂಬುದು ಒಂದು ವ್ಯವಸ್ಥೆ ಯಾಗಿದೆ. ಅದೇ ರೀತಿ ಸಂಪರ್ಕ ಸಾಧನವೂ ಹೌದು ಎಂದು ವ್ಯಾಖ್ಯಾನಿಸಿದ್ದಾರೆ. ಭಾಷೆ ಎಂಬುದು ನಿಂತ ನೀರಲ್ಲ ಅದು ಸರಾಗವಾಗಿ ಹರಿಯುವಂತಹಃ ಪ್ರಕ್ರಿಯೆಯಾಗಿದೆ. ಭಾಷೆ ಏಕಕಾಲಕ್ಕೆ ವೈಯಕ್ತಿಕವೂ, ಸಾಮಾಜಿಕವೂ ಆದ ಒಂದು ವ್ಯವಸ್ಥೆ ಎಂದರೆ ತಪ್ಪಾಗಲಾರದು. ವ್ಯಕ್ತಿಯ ಸಮಗ್ರ ವಿಕಸನಕ್ಕೆ ವೈಯಕ್ತಿಕವೂ, ಸಾಮಾಜಿಕವೂ ಆದ ಒಂದು ವ್ಯವಸ್ಥೆ ಭಾಷೆ ಎಂದರೆ ತಪ್ಪಾಗಲಾರದು. ವ್ಯಕ್ತಿಯ ವಿಕಾಸನಕ್ಕೆ ಮಾತ್ರವಲ್ಲದೆ, ಸಮಾಜದ, ಸಂಸ್ಕೃತಿಯ ಸಂಪರ್ಕ ಬೆಳೆಸಲೂ ಭಾಷೆಯೂ ನೇರವಾಗಿ ಸಹಾಯವಾಗುತ್ತದೆ. ಮಾನವ ಸಮಾಜ ಜೀವಿ (Social animal) ಯಾದದ್ದೂ ಭಾಷೆಯಿಂದಲೇ.

ಭಾಷೆ ಬರೀ ಅಭಿವ್ಯಕ್ತಿಸುವ ಮಾಧ್ಯಮ ಮಾತ್ರವಲ್ಲ ಮೇಲಾಗಿ ಅದು ವಾರ್ತಾವಾಹಕವೂ, ವಿಚಾರವಾಹಕವೂ, ಪ್ರವಾಹಕವೂ, ಕಾರ್ಯ ಪ್ರೇರಕವೂ ಹೌದು. ಭಾಷೆಯೂ ಸ್ಥಳದಿಂದ ಸ್ಥಳಕ್ಕೆ, ಜನರಿಂದ ಜನರಿಗೆ, ತಲೆಮಾರಿನಿಂದ ತಲೆಮಾರಿಗೆ ಮುನ್ನಡೆಯುವಂತಹ ಯೋಗ್ಯವಾಹಕವಾಗಿದೆ. ಅಂತೆಯೇ ಸ್ಥಳದಿಂದ ಸ್ಥಳಕ್ಕೆ ಜನರಿಂದ ಜನರಿಗೆ, ಭಿನ್ನವಾಗಿರುತ್ತದೆ. ಒಂದು ಸಮಾಜದ ಸಂಸ್ಕೃತಿ ಆಚಾರ, ವಿಚಾರಗಳನ್ನು ಕಾಲದಿಂದ ಕಾಲಕ್ಕೆ, ಜನರಿಂದ ಜನರಿಗೆ ಹೊಸ ವಿಚಾರಧಾರೆಗಳನ್ನು ತಿಳಿಸುವ ಕಾರ್ಯದತ್ತ ಮುನ್ನಡೆಯುತ್ತದೆ. ಭಾಷೆ ಮಾನವನ ಜೀವನದಲ್ಲಿ ಒಂದು ಅವಿಭಾಜ್ಯ ಅಂಗ ಕೂಡ. ವ್ಯವಹಾರಿಕ ಕ್ಷೇತ್ರ, ವಾಣಿಜ್ಯ ಕ್ಷೇತ್ರ, ಅಂಚೆ, ಪತ್ರ ವ್ಯವಹಾರ, ಕ್ರೀಡೆ, ಸರ್ಕಾರದ ಆಡಳಿತ, ಅಂತರಾಷ್ಟ್ರೀಯ ವ್ಯಾಪಾರ, ವಹಿವಾಟು, ಸಮಾರಂಭ, ಇತ್ಯಾದಿಗಳಲ್ಲಿ ಭಾಷೆಯ ಉಪಯುಕ್ತತೆ ಹೆಚ್ಚಾಗಿದೆ.

ಭಾಷೆಗೆ ಮಾನವ ಸಮೂಹವನ್ನು ಒಂದುಗೂಡಿಸುವ ಮತ್ತು ವಿಭಾಗಿಸುವ ಸಾಮರ್ಥ್ಯಗಳೆರಡೂ ಇವೆ. ಭಾಷೆಯಿಂದ ಮಾನವನ ಸಮೂಹಗಳಲ್ಲಿ ಅನೇಕ ವರ್ಗಗಳು ಬೆಳೆದುಕೊಂಡಿವೆ. ಈ ಹಲವಾರು ವರ್ಗಗಳ ನಡುವೆ ವ್ಯವಹಾರ ನಡೆಯಲು ಭಾಷೆ ಮಹತ್ತರವಾದ ಪಾತ್ರವಹಿಸುತ್ತದೆ. Language, Culture and Society (ಭಾಷೆ, ಸಮಾಜ ಮತ್ತು ಸಂಸ್ಕೃತಿ) ಈ ಮೂರು ಅಂಶಗಳು ಒಂದನ್ನೊಂದು ಅವಲಂಬಿತವಾಗಿವೆ. ಇವುಗಳಲ್ಲಿ ಒಂದಿಲ್ಲದಿದ್ದರೆ ಇನ್ನೊಂದಕ್ಕೆ ಅಸ್ತಿತ್ವ ಇಲ್ಲ. ಈ ಮೂರು ಅವಿಭಾಜ್ಯವಾದವುಗಳು. ಸಮಾಜ ಮತ್ತು ಸಂಸ್ಕೃತಿ ಭಾಷೆಯ ಒಂದು ಭಾಗವಾದರೂ ಅವುಗಳ ಸ್ವಭಾವ, ಸ್ವರೂಪ ಮತ್ತು ಎಲ್ಲೆಯನ್ನು ಅಧ್ಯಯನ ಮಾಡಲು ಭಾಷೆಯು ಅಗತ್ಯವಾದ ಸಂಪರ್ಕ ಸಾಧನವಾಗಿದೆ. ಭಾಷೆ ಎಂಬುದು ಮಾನವನ ಸ್ವಭಾವ ಎಂಬುವಷ್ಟರ ಮಟ್ಟಿಗೆ ಮಾನವನ ಉಸಿರಾಟ, ನೋಟ, ನಡತೆ, ಚಲನೆ ಮುಂತಾದವುಗಳಲ್ಲಿ ಲೀನವಾಗಿಬಿಟ್ಟಿದೆ. ಜೀವನದ ಅತ್ಯಂತ ಪ್ರಮುಖ ಅಂಗಗಳಾದ ಕಲೆ, ಸಾಹಿತ್ಯ, ವಿಜ್ಞಾನ,

ತತ್ವಜ್ಞಾನ, ಇತ್ಯಾದಿ ಕ್ಷೇತ್ರಗಳೂ ಬೆಳೆದು ಬಂದ ದಾರಿಯನ್ನು ಸುಲಭವಾಗಿ ಮತ್ತು ಸುಗಮವಾಗಿ ತಿಳಿಯಲು ಭಾಷೆ ಸಹಾಯವಾಗುತ್ತದೆ. ವೈಜ್ಞಾನಿಕ ರೀತಿಯ ವಿಧಿ-ವಿಧಾನಗಳನ್ನು ಅನುಸರಿಸಿ, ವೈಜ್ಞಾನಿಕ ರೀತಿಯ ಅಧ್ಯಯನ ಅಥವಾ ಸಂಶೋಧನೆ ನಡೆಸಲು ಭಾಷೆಯು ಕೇಂದ್ರ ಬಿಂದುವಾಗಿದೆ. ತತ್ವಜ್ಞಾನಿ, ಸಾಹಿತಿ, ವಿಜ್ಞಾನಿ, ರಾಜಕಾರಣಿ ಮತ್ತು ಶ್ರೀಸಾಮಾನ್ಯರ ಚಿಂತನೆಗೆ ಭಾಷೆ. ಒಂದು ದೊಡ್ಡ ಸಾಧನ ಮತ್ತು ಪ್ರೇರಕ, ಪೋಷಕವೂ ಹೌದು. ಶ್ರೀಸಾಮಾನ್ಯರ ಬುದ್ಧಿ ಶಕ್ತಿಯ ಪ್ರಚೋದನೆಗೆ ಮತ್ತು ಪ್ರೌಢಿಮೆಗೆ ಭಾಷೆಯ ನೆರವು ಅತ್ಯಗತ್ಯ.

ದೇಶ ವಿದೇಶಗಳ ಸಂಪರ್ಕ ಹೊಂದಬೇಕಾದರೆ ಭಾಷೆ ಅಗತ್ಯ ವ್ಯಕ್ತಿ-ವ್ಯಕ್ತಿಗಳ ಮಧ್ಯೆ, ಸಮಾಜ- ಸಮಾಜದ ಮಧ್ಯೆ ಸಂಪರ್ಕ, ಸೌಹಾರ್ದ, ಭಾವೈಕ್ಯತೆಯನ್ನು ಬೆಳೆಸಲು ಮತ್ತು ಕಾಪಾಡಲು ಭಾಷೆ ಅಗತ್ಯವಾಗಿದೆ. ಒಂದು ದೇಶದ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಬೇರೆಯವರಿಗೆ ತಿಳಿಸಲು ಭಾಷೆ ಬಹಳ ಮಹತ್ತರವಾದ ಪಾತ್ರವಹಿಸುತ್ತದೆ. ಒಟ್ಟಿನಲ್ಲಿ ಭಾಷೆ ಮಾನವನ ಅವಿಭಾಜ್ಯ ಅಂಗ. ಅದು ಮಾನವನ ದೈನಂದಿನ ಬದುಕಿನಲ್ಲಿ ವಿಶಿಷ್ಟ ಮತ್ತು ಅಷ್ಟೇ ವಿಶೇಷವಾದ ಪಾತ್ರವಹಿಸುತ್ತದೆ. ಭಾಷೆಗೆ ಸಾವಿಲ್ಲ. ಒಂದು ಶತಮಾನದಿಂದ ಇನ್ನೊಂದು ಶತಮಾನಕ್ಕೆ ಭಿನ್ನವಾಗುತ್ತಾ ಹೋಗುತ್ತದೆ. ಹೀಗೆ ಭಾಷಾ ಪ್ರಯೋಜನಗಳ ಬಗ್ಗೆ ಸೂಕ್ಷ್ಮವಾಗಿ ಕಣ್ಣು ಆಡಿಸಿದರೆ, ಧಿಗಂತದವರೆಗೂ ಅದರ ಬೆಳಕು ಚೆಲ್ಲುತ್ತದೆ. ಆ ಬೆಳಕು ಎಂದಿಗೂ ಮಾಯವಾಗುವುದಿಲ್ಲ ಬದಲಾಗಿ ಸದಾ ಬೆಳಗುತ್ತದೆ.

**ಡಾ.ಅವರೆಕಾಡು ವಿಜಯಕುಮಾರ್**
ಸಂಯೋಜನಾಧಿಕಾರಿ
ಭಾಷಾಂತರ ಅಧ್ಯಯನ ವಿಭಾಗ
ಕರಾಮುವಿ, ಮೈಸೂರು-570006

# UGC's Double Admissions: A Game-Changer for Higher Education?

The University Grants Commission (UGC) has recently announced a significant policy change, allowing colleges and universities across India to admit students twice a year. This move, aimed at enhancing accessibility and flexibility in higher education, has sparked both enthusiasm and concerns among various stakeholders.

Understanding the Double Admissions Policy

The UGC's decision to permit double admissions is a departure from the traditional annual admission cycle. It offers institutions the flexibility to admit students in both January and July, potentially expanding their intake capacity and catering to a wider pool of applicants.

## Potential Benefits of Double Admissions

1. Increased Accessibility: By offering multiple admission windows, the UGC aims to make higher education more accessible to students who may have missed out on the traditional admission cycle due to various reasons, including:
   - o Delayed exam results
   - o Financial constraints
   - o Personal or family emergencies
2. Flexibility for Students: Students can have more flexibility in planning their academic journey. Those who are not satisfied with their initial admission choices can opt for a second chance, potentially leading to better-aligned educational paths.
3. Enhanced Institutional Efficiency: Double admissions can enable institutions to optimize their resources and infrastructure by spreading the workload throughout the year. This can lead to improved efficiency and potentially lower costs.
4. Global Alignment: The move aligns India's higher education system with international practices, where multiple admission cycles are common in many countries. This can facilitate student and faculty mobility.

## Potential Challenges and Considerations

1. Quality Concerns: There are concerns that the increased intake might compromise the quality of education. Institutions may need to ensure that they have adequate resources and faculty to maintain standards.
2. Administrative Burden: Implementing double admissions can increase the administrative workload for institutions, requiring careful planning and coordination.
3. Student Placement: Ensuring timely and effective placement of students who graduate in the second cycle might pose challenges, especially in competitive job markets.
4. Equity and Fairness: There is a need to ensure that the double admissions policy does not create disparities or inequities among students from different backgrounds.

The UGC's decision to allow double admissions is a significant step towards making higher education more accessible and flexible in India. While there are potential challenges to address, the policy holds promise in expanding opportunities for students and improving the overall efficiency of higher education institutions. However, careful planning, implementation, and monitoring will be crucial to ensure that the benefits of this policy are realized while maintaining quality standards. As the policy unfolds, its impact on the higher education landscape will be closely watched and evaluated.

**-Santhosh Naik R**

## ಸಂಪಾದಕ ಮಂಡಳಿ

* ಪ್ರೊ. ಶರಣಪ್ಪ ವಿ. ಹಲಸೆ, ಕುಲಪತಿಗಳು
* ಪ್ರೊ. ಕೆ.ಬಿ. ಪ್ರವೀಣ, ಕುಲಸಚಿವರು
* ಪ್ರೊ. ಎನ್. ಲಕ್ಷ್ಮಿ, ಡೀನ್ (ಶೈಕ್ಷಣಿಕ)
* ಪ್ರೊ. ಎಂ.ರಾಮನಾಥಂ ನಾಯುಡು, ಡೀನ್(ಅಧ್ಯಯನ ಕೇಂದ್ರ)
* ಶ್ರೀಮತಿ ಶ್ವೇತ ಎಚ್.ವಿ, ಹಣಕಾಸು ಅಧಿಕಾರಿಗಳು
* ಡಾ. ಸಂತೋಷ್ ನಾಯಕ್ ಆರ್, ಸಂಪಾದಕರು
* ಡಾ. ಹರೀಶ.ಎನ್, ಉಪ ಸಂಪಾದಕರು
* ಡಾ. ಅವರೆಕಾಡು ವಿಜಯಕುಮಾರ್, ಉಪ ಸಂಪಾದಕರು
* ಡಾ. ಶೀಲಾ .ವಿ, ಉಪ ಸಂಪಾದಕರು
* ಶ್ರೀ ಮುನಿಸ್ವಾಮಿ , ಸಂಪಾದಕೀಯ ಸಹಕಾರ

ಬರಹಗಳನ್ನು ksounews@gmail.com ಗೆ ಕಳುಹಿಸುವುದು.
ವಿಳಾಸ
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
**ಮುಕ್ತ ಗಂಗೋತ್ರಿ, ಮೈಸೂರು- 570006**
Website: www.ksoumysuru.ac.in
Facebook: www.facebook.com/ksoumysuru
Twitter: www.twitter.com/ksoumysuru

## ಪ್ರಕಟಣೆ

**ಕರಾಮುವಿಯ 2012-13 ಹಾಗೂ 2014-15 ಸಾಲಿನಲ್ಲಿ ಪ್ರವೇಶಾತಿ ಪಡೆದು ಪದವಿ ಹೊಂದಿದ ಕರಾಮುವಿ ಇನ್ ಹೌಸ್ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣ, ನೇಮಕಾತಿ ಹಾಗೂ ಮುಂಬಡ್ತಿಗೆ ಪರಿಗಣಿಸತಕ್ಕದ್ದೆಂದು ರಾಜ್ಯ ಸರ್ಕಾರ 05.03.2018ರಲ್ಲಿ ಆದೇಶಿಸಿದ್ದು, ಈ ಸರ್ಕಾರಿ ಆದೇಶದ ಪ್ರತಿಯನ್ನು ಕರಾಮುವಿ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ.**

## ರಾಜ್ಯ ಮಟ್ಟದ ಕಾರ್ಯಗಾರ



ದಿನಾಂಕ 25.06.2024 ರಂದು ಕರಾಮುವಿಯ ಕಾವೇರಿ ಭವನದಲ್ಲಿ ಸಂಶೋಧನೆ ಮತ್ತು ಪ್ರಕಟಣಾ ನೀತಿಶಾಸ್ತ್ರ ಕುರಿತು ಆರು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎನ್.ಕೆ.ಲೋಕನಾಥ್ ರವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಡೀನ್(ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮಿ, ಡೀನ್(ಅಧ್ಯಯನ ಕೇಂದ್ರ) ಪ್ರೊ.ಎಂ.ರಾಮನಾಥಂ ನಾಯುಡು ಹಾಗು ಕರಾಮುವಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ವಿಚಾರ ಸಂಕಿರಣ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಜೊತೆಗೆ Indian Society of Professional Social Work (ISPSW) ಸಹಯೋಗದಲ್ಲಿ ಮೇ 16,17,ಮತ್ತು 18ರಂದು ಮೂರು ದಿನಗಳ ರಾಷ್ಟ್ರೀಯ " New Vistas in Social Work : Navigating the changing landscope in Education Research ಎಂಬ ವಿಚಾರ ಸಂಕಿರಣವನ್ನು ಕರಾಮುವಿಯ ಘಟಿಕೋತ್ಸವ ಭವನದಲ್ಲಿ ಆಯೋಜಿಸಲಾಗಿತ್ತು. ಉದ್ಘಾಟನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ಎನ್.ಕೆ ಲೋಕನಾಥ್ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ.ಹಲಸೆ ರವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಎಂ.ವಿ ಶ್ರೀ ಗಣೇಶ್, ಮುಖ್ಯ ಭಾಷಣ ಕಾರರಾಗಿ ಪ್ರೊ.ಮನೀಶ್ ಕುಮಾರ್.ಜಾ, ಗೌರವ ಅತಿಥಿಗಳಾಗಿ ಪ್ರೊ.ಐ.ಎ.ಶರೀಫ್, ಪ್ರೊ.ವೈ.ಎಸ್ ಸಿದ್ದೇಗೌಡ, ಕುಲಸಚಿವರಾದ ಪ್ರೊ. ಕೆ.ಬಿ.ಪ್ರವೀಣ, ಪ್ರೊ.ಬಿ ರಮೇಶ್, ಪ್ರೊ.ಕೆ.ಜಿ ಪರಶುರಾಮ್, ಪ್ರೊ.ಆರ್.ಶಿವಪ್ಪ, ಪ್ರೊ ಆರ್. ಧನಶೇಖರ ಪಾಂಡಿಯನ್ ಹಾಗು ಕರಾಮುವಿಯ ಸಮಾಜಶಾಸ್ತ್ರ ಅಧ್ಯಯನ ವಿಭಾಗ ಮುಖ್ಯಸ್ಥರು ಹಾಗು ವಿಚಾರ ಸಂಕಿರಣದ ಸಂಘಟನಾ ಕಾರ್ಯದರ್ಶಿ ಪ್ರೊ.ಬಿ.ಎಸ್.ಗುಂಜಾಳ್, ಡಾ.ಚಂದ್ರ ಮೌಳಿ, ಡಾ.ಹೆಚ್.ಪಿ ಜ್ಯೋ ಮತ್ತು ಅಧ್ಯಾಪಕರು, ಸಂಶೋಧಕರು, ವಿದ್ಯಾರ್ಥಿಗಳು ಭಾಗವಹಿಸಿದರು..

